ಈಗ ನಿಮ್ಮ ಅಜ್ಜನ ಮನೆಗೆ ಹೋಗ್ತೇವೆ. ಮಾಮ ಮತ್ತು ನನಗೆ ಚೆನ್ನೈಯಲ್ಲಿ ಮಾಡಬೇಕಾದ ಸ್ವಲ್ಪ ಕೆಲಸ ಇದೆ. ಅದಕ್ಕಾಗಿ ನಾವಿಬ್ಬರು ಪುನಃ ಇಲ್ಲಿಗೆ ಬರಬೇಕಾಗಿದೆ. ನೀವು ಅಜ್ಜನ ಜೊತೆ ಇರಿ. ಇನ್ನು ಮುಂದೆ ನಾವೆಲ್ಲ ಅಲ್ಲೇ ಅಜ್ಜನ ಜೊತೆಯೇ ಇರುತ್ತೇವೆ, ಬೇರೆ ಎಲ್ಲಿಗೂ ಹೋಗುವುದಿಲ್ಲ ಎಂದು ಹೇಳು. ಅವರನ್ನು ಸಮಾಧಾನವಾಗಿ ಇರಿಸಲು ಇಷ್ಟು ಹೇಳಬೇಕಾದ್ದು ಅಗತ್ಯ' ಎಂದ ಅಭಿ, 'ಶಮಿ ಏನೆಲ್ಲ ಪ್ರಶ್ನೆಗಳನ್ನು ಕೇಳಬಹುದು. ಗದರಿಸಬೇಡ. ಇನ್ನು ನಾವು ಮಾಡಲಿಕ್ಕಿರುವುದು ಇಷ್ಟೆ: ಎರಡು ಅಥವಾ ಮೂರು ದಿನಗಳ ಬಳಿಕ ಚೆನ್ನೈಗೆ ಬಂದು ಡ್ರಾಫ್ಟ್ ತೆಗೆದುಕೊಂಡು ಹೋಗುವುದು. ನಾವು ಎರಡು ದಿನ ಶಮಿ ಮತ್ತು ಕಾಂತಿಯ ಜೊತೆ ಮನೆಯಲ್ಲಿ ಆರಾಮವಾಗಿ ಇದ್ದು, ನಾಡಿದ್ದು ಚೆನ್ನೈಗೆ ಬರೋಣ. ಚೆನ್ನೈಯಿಂದ ನಾವು ಟ್ಯಾಕ್ಸಿಯಲ್ಲಿ ಮನೆಗೆ ಹೋಗೋಣ' ಎಂದು ಅಭಿ ಹೇಳಿದ.

'ಕಾರು ಕೊಂಡಾತನನ್ನು ನಾನು ಬರಲು ಹೇಳಿದ್ದೇನೆ. ಶೆಡ್ಡಿನ ಬೀಗದ ಕೈಯನ್ನು ಕಾರಿನ ಓನರಿಗೆ ಕೊಟ್ಟು, ಉಳಿದಿರುವ ನಮ್ಮ ಸೂಟ್ ಕೇಸ್‌ಗಳನ್ನು ಒಂದು ಟ್ಯಾಕ್ಸಿಯಲ್ಲಿ ಹಾಕ್ಕೊಂಡು ಏರ್‌ಪೋರ್ಟ್‌ಗೆ ಹೋಗೋಣ' ಎಂದಳು.

'ಸರಿ' ಎಂದ ಅಭಿ.

ಅಭಿ ಮತ್ತು ಸುಕೃತಿ ಶಮಿ ಮತ್ತು ಕಾಂತಿಯನ್ನು ಬಳಿಗೆ ಕರೆದು, 'ನನಗೆ ಮಾಮನ ಜೊತೆ ಕೆಲವು ವಿಷಯಗಳನ್ನು ಮಾತಾಡೋದಕ್ಕಿದೆ. ಎರಡೇ ನಿಮಿಷ. ನೀವು ಹಾಲ್‌ನಲ್ಲಿ ಮೌನವಾಗಿ ಪುಸ್ತಕ ಓದ್ತಾ ಇರಿ' ಎಂದು ಹೇಳಿ, ಒಳಗೆ ಕೋಣೆಗೆ ಹೋಗಿ, ಅಭಿಯನ್ನು ಕರೆದು, 'ಅಣ್ಣಾ, ನಾನು ಒಂದು ವಿಷಯವನ್ನು ನಿನ್ನಿಂದ ಮುಚ್ಚಿಡುತ್ತಿದ್ದೇನೆ. ಆದರೆ ಅದನ್ನು ನಿನಗೆ ಈಗ ಹೇಳಲೇ ಬೇಕು' ಎಂದು ಕಣ್ಣೀರು ಒರಸಿಕೊಳ್ಳುತ್ತಾ ಹೇಳಿದಳು, 'ಇದು ನಾನು ಸಾನ್‌ಫ್ರಾನ್ಸಿಸ್ಕೋದಿಂದ ಚೆನ್ನೈಗೆ ಹೊರಡುವುದಕ್ಕೆ ಮೊದಲಿನ ಸಂಗತಿ. ಒಂದು ದಿನ ಬದುಕಿನಲ್ಲಿ ಸಂಪೂರ್ಣ ಹತಾಶಳಾದ ನಾನು ಆತ್ಮಹತ್ಯೆ ಮಾಡಲು ನಿರ್ಧರಿಸಿದೆ. ಕರುಣಾನಿಧಿ ನನ್ನ ಮೇಲೆ ನಡೆಸಿದ ಕ್ರೌರ್ಯವನ್ನು ವಿವರಿಸಿ, ನನ್ನ ನಿರ್ಧಾರವನ್ನು ತಿಳಿಸಿ, ನನ್ನ ಮಕ್ಕಳನ್ನು ಅಮೆರಿಕ ಸರಕಾರದ ಆಶ್ರಯಕ್ಕೆ ಬಿಡುತ್ತೇನೆ; ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಒಂದು ಪತ್ರ ಬರೆದು ಅಮೆರಿಕೆಯ ಅಧ್ಯಕ್ಷರಿಗೆ ಕಳಿಸಿದೆ. ಮರುದಿನವೇ ಪೊಲೀಸ್ ಇಲಾಖೆಯ ಇಬ್ಬರು ಅಧಿಕಾರಿಗಳು ಬಂದರು. ಒಂದು ಗಂಟೆಯ ಹೊತ್ತು ಹಲವು ಪ್ರಶ್ನೆಗಳನ್ನು ಕೇಳಿದರು. ಅಪ್ಪ ಅಮ್ಮ ಮತ್ತು ಕುಟುಂಬದ ಬಗ್ಗೆ ಪ್ರಶ್ನಿಸಿದರು. ನನ್ನ ಪೂರ್ತಿ ಬಯೋ ಡೇಟ, ಸಂಪರ್ಕ ನಂಬರ ಇಮ್ಮೈಲ್ ಐಡಿ ಎಲ್ಲಾ ಕೊಟ್ಟೆ. ಅವರು ಅವರ ಸಂಪರ್ಕ ವಿಳಾಸ ಇಮ್ಮೈಲ್ ಐಡಿ ನನಗೆ ಕೊಟ್ಟು, ಅಗತ್ಯವಿದ್ದರೆ ಸಂಪರ್ಕಿಸಲು ತಿಳಿಸಿದರು.

'ಕರುಣಾನಿಧಿ ಎಲ್ಲಿದ್ದಾನೆ? ಎಂದು ಪೊಲೀಸ್ ಆಫೀಸರ್ ಕೇಳಿದರು. ಅವನು ಅವನ ಆಫೀಸಿನಲ್ಲಿರುವುದಾಗಿ ಹೇಳಿ, ಆಫೀಸಿನ ವಿಳಾಸ ಕೊಟ್ಟೆ. ಪೊಲೀಸರು ಅಲ್ಲಿಗೆ ಹೋಗಿ ಅವನನ್ನು ಕರೆದುಕೊಂಡು ಹೋದರು. ನೀನು ಆತ್ಮಹತ್ಯೆ ಮಾಡಿಕೊಳ್ಳಬೇಡ. ಕರುಣಾನಿಧಿಯನ್ನು ನಾವು ನಾವು ನೋಡಿಕೊಳ್ಳುತ್ತೇವೆ. ನೀನು ಇಚ್ಛೆಪಟ್ಟರೆ ಮಕ್ಕಳನ್ನು ಕರೆದುಕೊಂಡು ಇಂಡಿಯಕ್ಕೆ ನಿನ್ನ ಅಪ್ಪನ ಬಳಿ ಹೋಗು. ನಾವೇ ನಿನ್ನನ್ನು ಮತ್ತು ಮಕ್ಕಳನ್ನು ವಿಮಾನದಲ್ಲಿ ಕುಳ್ಳಿರಿಸಿ ಕಳಿಸುತ್ತೇವೆ. ಅನಂತರ ನಿನಗೆ ಸಾಧ್ಯವಾದಾಗ ಪುನಃ ನಿನ್ನ ಕೆಲಸಕ್ಕೆ ಅಮೆರಿಕೆಗೆ ಬರಬೇಕೆಂದಿದ್ದರೆ ನೀನು ಬರಬಹುದು ಎಂದರು'.

'ಅದೇ ದಿನ ನಾನು ಸಾನ್‌ಫ್ರಾನ್ಸಿಸ್ಕೊ ಬಿಟ್ಟು ಚೆನ್ನೈಗೆ ಬರುವ ನಿರ್ಧಾರ ಮಾಡಿದೆ. ಆ ದಿನವೇ ನಮ್ಮ ಉಡುಪು, ಮಕ್ಕಳ ಪಠ್ಯಪುಸ್ತಕಗಳು ಮುಂತಾದ ಎಲ್ಲಾ ವಸ್ತುಗಳನ್ನು ಸೂಟ್ ಕೇಸುಗಳಲ್ಲಿ ತುಂಬಿಸತೊಡಗಿದೆ. ಶಮಿ ಮತ್ತು ಕಾಂತಿ 'ಯಾಕೆ ಯಾಕೆ' ಎಂದು ಕೇಳುತ್ತಲೇ ಇದ್ದರು. ಅವರ ಪ್ರಶ್ನೆಗೆ ನನ್ನ ಬಳಿ ಉತ್ತರ ಇರಲಿಲ್ಲ.

ಅನಂತರ ಆಫೀಸರುಗಳು ಕೊಟ್ಟ ಐಡಿಗೆ ಇಮೇಲ್ ಬರೆದೆ, 'ಕ್ಷಮಿಸಿ, ನಾನು ನಿಮಗೆ ತೊಂದರೆ ಕೊಡುತ್ತಿದ್ದೇನೆ. ನಾನು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಚೆನ್ನೈಗೆ ಹೋಗುತ್ತೇನೆ. ಅಲ್ಲಿ ನನ್ನದೇ ಆದ ಮನೆಯಿದೆ ಎಂದು ಹೇಳಿದೆ'

'ಯಾವಾಗ ಹೋಗುತ್ತಿ?' ಅವರು ಕೇಳಿದರು.

'ನಾಳೆಯೇ ಹೋಗುತ್ತೇನೆ' ಎಂದೆ.

'ಆಗಲಿ ನಿನ್ನ ಇಚ್ಛೆ. ಸ್ವಸ್ಥ ಇದ್ದೇನೆ ಅಂತ ನಿನಗೆ ವಿಶ್ವಾಸವಿದೆಯೆ?' ಎಂದು ಕೇಳಿದರು. 'ಸ್ವಸ್ಥ ಇದ್ದೇನೆ' ಎಂದು ಹೇಳಿದೆ.

'ಏನೇ ಇರಲಿ, ನೀನು ಏರ್‌ಪೋರ್ಟ್‌ಗೆ ಹೊರಡುವ ಮೊದಲು ನಮಗೆ ಒಂದು ಕಾಲ್ ಮಾಡು. ನಮ್ಮಲ್ಲಿ ಒಬ್ಬರು ನಿನ್ನ ಜೊತೆ ಏರ್‌ಪೋರ್ಟ್‌ಗೆ ಬರುತ್ತಾರೆ. ನೀನು ಮಕ್ಕಳ ಜೊತೆ ವಿಮಾನ ಹತ್ತುವವರೆಗೆ ಇರುತ್ತಾರೆ' ಎಂದರು.

''ಅಪ್ಪ ಹೇಗಿದ್ದಾರೆ? ಎಂಬ ಪ್ರಶ್ನೆ ಮನಸ್ಸಿನಲ್ಲಿ ಮತ್ತೆ ಮತ್ತೆ ಮೂಡುತ್ತಲೇ ಇತ್ತು. ಆದರೆ ಕರುಣಾನಿಧಿಯನ್ನು ಮದುವೆಯಾದಂದಿನಿಂದ ಅಪ್ಪನ ಸಂಪರ್ಕ ಬರೀ ಹಣಕ್ಕಾಗಿ ಮಾತ್ರವಾಗಿತ್ತು ಎನ್ನುವ ಸತ್ಯ ಅಪ್ಪನ ಬಗ್ಗೆ ಮಾತಾಡಲು ಹಿಂಜರಿಕೆಯುಂಟು ಮಾಡುತ್ತಿತ್ತು'.

ಅಣ್ಣನ ಬಳಿ ಹೇಳಬೇಕೆಂದುಕೊಂಡದ್ದನ್ನು ಹೇಳಿ ಮುಗಿಸಿದ ಮೇಲೆ ಅಭಿಯ ಪ್ರತಿಕ್ರಿಯೆ ಏನಿರಬಹುದೋ ಎಂಬ ಆತಂಕದಿಂದಲೇ ಸುಕೃತಿ, 'ಅಣ್ಣಾ, ಅಪ್ಪ ಹೇಗಿದ್ದಾರೆ?' ಎಂದು ಕೇಳಿದಳು. ಯಾವತ್ತೂ ಕೇಳದಿದ್ದ ಪ್ರಶ್ನೆಯನ್ನು ಈಗ ಕೇಳುತ್ತಿದ್ದಾಳೆ ಸುಕೃತಿ ಎಂದು ಅಭಿಯ ಮನಸ್ಸು ಹೇಳಿತು. ಅವಳ ದನಿಯಲ್ಲಿದ್ದ ಕಂಪನವನ್ನು ಅಭಿ ಗಮನಿಸಿದ. ಇಷ್ಟು ವರ್ಷಗಳಲ್ಲಿ ಅಪ್ಪನೊಡನೆ, 'ಅಪ್ಪಾ ಹೇಗಿದ್ದೀರಿ ಎಂದು ಕೇಳಿದ್ದೀಯಾ?' ಎಂದು ಕೇಳಬೇಕೆನಿಸಿತು ಅಭಿಗೆ. ಆದರೆ ಅವಳನ್ನು ಅಷ್ಟು ನೋಯಿಸುವುದು ಸರಿಯಲ್ಲ ಎಂದುಕೊಂಡು, 'ಚೆನ್ನಾಗಿದ್ದಾರೆ, ನೀನೇ ನೋಡುವೆಯಂತೆ' ಎಂದ ಅಭಿ. 'ನೀನೇ ನೋಡುವೆಯಂತೆ' ಎಂಬ ಮಾತು ಪುನಃ ಸುಕೃತಿಯ ಮನಸ್ಸಿನಲ್ಲಿ ತಲ್ಲಣ ಉಂಟುಮಾಡಿತು.

ಅಭಿಯ ಮಾತನ್ನು ಕೇಳಿದ ಸುಕೃತಿಗೆ ಉಂಟಾದ್ದು ಅಪ್ಪ ಜೀವಂತವಾಗಿಲ್ಲ ಅಥವಾ ಮೃತ್ಯುಶಯ್ಯೆಯಲ್ಲಿದ್ದಾರೆ ಎಂಬ ಒಂದೇ ಯೋಚನೆ. ಸುಕೃತಿಯ ಆ ಯೋಚನೆ ಅಭಿ ನಿರೀಕ್ಷಿಸಿದ್ದೇ ಆಗಿತ್ತು. ಅದಕ್ಕಾಗಿಯೇ ಇವತ್ತೇ ವಾಪಸಾಗಬೇಕೆಂಬ ತರಾತುರಿಯಿಂದ ಮಾತಾಡಿದ್ದ. ಸುಕೃತಿ ಈ ತನಕ ಅಪ್ಪನನ್ನು ಕಂಡದ್ದು ಹಣದ ಮರವಾಗಿ, ಈಗ ಅವಳು ನಿಜವಾದ ಮನುಷ್ಯನನ್ನು ಕಾಣಬೇಕು, ಈಗಲೇ ಪೂರ್ಣ ಸತ್ಯ ತಿಳಿಯದೆ ಸುಕೃತಿ ಸ್ವಲ್ಪ ತೊಳಲಾಡಬೇಕು, ದುಃಖದ ಅರ್ಥ ತಿಳಿಯಬೇಕು, ಸಂಬಂಧದ ಅರ್ಥ ತಿಳಿಯಬೇಕು. ಆಗ ಅವಳ ಮನಸ್ಸು ಶುದ್ಧವಾಗಿ, ಆಂತರ್ಯದ ರೂಕ್ಷತೆ ಕಡಿಮೆಯಾಗಬಹುದು ಎಂಬುದು ಅಭಿಯ ಯೋಚನೆಯಾಗಿತ್ತು. ಯಾಕೆಂದರೆ, ಅವಳ ಜೀವಂತಿಕೆ ಇಲ್ಲದ ಪ್ರತಿಕ್ರಿಯೆಯಲ್ಲೇ ಅಭಿಗೆ ಅವಳ ಮನಸ್ಸಿನಲ್ಲಿ ಮತ್ತು ಬದುಕಿನಲ್ಲಿ ಏನಾಗಿರಬಹುದು ಎಂಬ ಸುಳಿವು ದೊರೆತಿತ್ತು. ಮನುಷ್ಯನನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಅವನ ಅಳುವಿನಲ್ಲಿ ಮತ್ತು ನಗುವಿನಲ್ಲಿ ಮಾತ್ರ; ಸುಖದಲ್ಲಿ ಮತ್ತು ಕಷ್ಟದಲ್ಲಿ ಅಲ್ಲ ಎಂದೆನಿಸಿತು ಅಭಿಗೆ.

28

ಮಧ್ಯಾಹ್ನ ಎರಡು ಗಂಟೆಗೆ ಚೆನ್ನೈಯಿಂದ ಹೊರಟ ವಿಮಾನ ಬೆಂಗಳೂರಿಗೆ ಐದು ಗಂಟೆಗೆ ತಲುಪಿದ್ದರೂ, ಬೆಂಗಳೂರಿಂದ ಟ್ಯಾಕ್ಸಿಯಲ್ಲಿ ಆನೆಮಹಲ್ ತಲುಪಲು ಎರಡೂವರೆ ಗಂಟೆ ಬೇಕಾಯಿತು. ಸುಕೃತಿ, ಮಕ್ಕಳು ಮತ್ತು ಅಭಿ ಸಕಲೇಶಪುರದಲ್ಲಿ ಹೋಟೆಲು ಹೊಕ್ಕಾಗ ಬಾಗಿಲಲ್ಲಿ ನಿಂತಿದ್ದ ನರಹರಿಯ ಕಣ್ಣುಗಳಲ್ಲಿ ಆಗಲೇ ಕಣ್ಣೀರಾಡುತ್ತಿರುವುದು ಕಾಣಿಸಿತು.

## ಬದ್ಧ

ನನ್ನಾಕೆಯ
ಮಾತಿಗೆ
ಸದಾ ನಾನು ಬದ್ಧ
ಕಾರಣವಿಷ್ಟೆ
ನನ್ನಾಕೆಯ ನಾಲಿಗೆ
ಒಂಚೂರು ಉದ್ದ!

★ ಸಮುದ್ರವಳ್ಳಿ ವಾಸು



ಈಶ್ವರ